ಆಕಾಶವಾಣಿ

**14.06.2024**

ಪ್ರದೇಶ ಸಮಾಚಾರ

ಓದುತ್ತಿರುವವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

- ಮುಂಗಾರು ಕೃಷಿ ಹಂಗಾಮಿಗೆ, ಬೇಡಿಕೆಗಿಂತಲೂ ಹೆಚ್ಚು ಬಿತ್ತನೆ ಬೀಜ ಹಾಗೂ ರಸಗೊಬ್ಬರ ದಾಸ್ತಾನು ಲಭ್ಯ – ಎನ್.ಚಲುವರಾಯಸ್ವಾಮಿ.
- ಎತ್ತಿನಹೊಳೆ ಹಾಗೂ ಭದ್ರಾ ಮೇಲ್ದಂಡೆ ಯೋಜನೆ; ಉನ್ನತಮಟ್ಟದ ತಜ್ಞರ ಸಮಿತಿ ರಚನೆ – ಡಿ.ಕೆ.ಶಿವಕುಮಾರ್.
- 'ಗರ್ಭಿಣಿಯರ ಆರೋಗ್ಯದ ದತ್ತು ಯೋಜನೆ'; ಉತ್ತರ ಕನ್ನಡ ಜಿಲ್ಲೆಯಲ್ಲಿ, ಮಾದರಿ ಅನುಷ್ಠಾನ.
- ಖೇಲೋ ಇಂಡಿಯಾದಿಂದ, ಮಲ್ಲಕಂಬ ತರಬೇತಿಗೆ, ರಾಮನಗರ ಸಾಹಸ ಕಲಾ ಅಕಾದೆಮಿಗೆ, ರಾಷ್ಟ್ರೀಯ ಮಾನ್ಯತೆ.
- ಇಂದು, ವಿಶ್ವ ರಕ್ತದಾನಿಗಳ ದಿನ.

<><><>

ಈಗ ವಾರ್ತೆಗಳ ವಿವರ

<><><>

ಹರ್ಷ

ಪ್ರದೇಶ ಸಮಾಚಾರ
**14.06.2024**
ಎಚ್.ಕೆ.ಪಾಟೀಲ/ಬಿಂಡವಾಳ

ರಾಜ್ಯ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗದ ಅನುಸಾರ, ವೇತನ ಪರಿಷ್ಕರಣೆ ಮತ್ತು ಸೌಲಭ್ಯಗಳನ್ನು ನೀಡಲು, ಅನೌಪಚಾರಿಕ ಚರ್ಚೆ ನಡೆಸಲಾಗಿದೆ. ಸಂಪುಟ ಸಭೆಗೆ ಅಧಿಕೃತ ಪ್ರಸ್ತಾವ ಸಲ್ಲಿಕೆಯಾಗಿಲ್ಲ. ಹೀಗಾಗಿ ಯಾವುದೇ ನಿರ್ಣಯಗಳಾಗಿಲ್ಲ ಎಂದು, ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ್ ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ನಡೆದ, ಸಚಿವ ಸಂಪುಟ ಸಭೆ ಬಳಿಕ, ಸುದ್ದಿಗೋಷ್ಠಿಯಲ್ಲಿ ಸಚಿವರು ಮಾತನಾಡಿ, ಹಿಂದಿನ ಸಚಿವ ಸಂಪುಟ ಸಭೆಯಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿದ್ದ 147 ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿ, ಆ ಪೈಕಿ 97 ಪ್ರಸ್ತಾವಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ ಎಂದರು.

ಕಲ್ಯಾಣ ಕರ್ನಾಟಕ ಹಾಗೂ ವಾಯವ್ಯ ಸಾರಿಗೆ ನಿಗಮಗಳಿಗೆ, 46 ಕೋಟಿ ರೂಪಾಯಿ ವೆಚ್ಚದಲ್ಲಿ, ಪೂರ್ಣ ಕವಚ ನಿರ್ಮಿತ 102 ಬಸ್‌ಗಳ ಖರೀದಿಗೆ ಸಂಪುಟ ಅನುಮೋದಿಸಿದೆ ಎಂದರು.

2025ರ ಫೆಬ್ರವರಿ 12 ರಿಂದ, ಮೂರು ದಿನ, ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಆಯೋಜಿಸಲಾಗಿದೆ ಎಂದು ಸಚಿವ ಪಾಟೀಲ, ನುಡಿದರು.

ಹರ್ಷ/ಹೊಂಗಲ್/ಕೆ.ವಾ.ಇ.ಬೆಂ/ಎಚ್.ಕೆ.ಪಾಟೀಲ ಎಕ್ಸ್ ಖಾತೆ/ಮು.ಮಂ. ಎಕ್ಸ್ ಖಾತೆ/ಸುಧೀಂದ್ರ ಎಚ್.ಆರ್.

ಪ್ರದೇಶ ಸಮಾಚಾರ
14.06.2024
ಚಲುವರಾಯಸ್ವಾಮಿ/ಕೃಷಿ

ರಾಜ್ಯ ಸರ್ಕಾರ, ಮುಂಗಾರು ಕೃಷಿ ಹಂಗಾಮಿಗೆ, ಸಕಲ ಸಿದ್ಧತೆ ಮಾಡಿಕೊಂಡಿದೆ. ಎಲ್ಲಾ ಜಿಲ್ಲೆಗಳಲ್ಲಿ ಬೇಡಿಕೆಗಿಂತಲೂ ಹೆಚ್ಚುವರಿಯಾಗಿ ಬಿತ್ತನೆ ಬೀಜ ಹಾಗೂ ರಸಗೊಬ್ಬರ ದಾಸ್ತಾನು ಲಭ್ಯವಿದೆ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ಸ್ಪಷ್ಟ ಪಡಿಸಿದ್ದಾರೆ.

ಜಿಲ್ಲಾವಾರು ದಾಸ್ತಾನು ಮಾಡಲಾದ, ಬಿತ್ತನೆ ಬೀಜ ಹಾಗೂ ರಸ ಗೊಬ್ಬರದ ಮಾಹಿತಿ, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಹಂಚಿಕೊಂಡಿರುವ ಸಚಿವರು, ರಾಜ್ಯದ ಯಾವುದೇ ಜಿಲ್ಲೆಯಲ್ಲಿ, ಬಿತ್ತನೆ ಬೀಜ ಅಥವಾ ರಸಗೊಬ್ಬರದ ಅಭಾವ ಉಂಟಾಗಿಲ್ಲ. ರೈತರು ಊಹಾಪೋಹಗಳಿಗೆ ಕಿವಿಗೊಡದಂತೆ, ಅವರು ಮನವಿ ಮಾಡಿದ್ದಾರೆ.

ಹರ್ಷ/ಹೊಂಗಲ್/ಸಚಿವರ ಎಕ್ಸ್ ಖಾತೆ

ಪ್ರದೇಶ ಸಮಾಚಾರ
14.06.2024
ಡಿಕೆಶಿ/ಎತ್ತಿನಹೊಳೆ

ಚಿಕ್ಕಬಳ್ಳಾಪುರ, ಕೋಲಾರ ಸೇರಿದಂತೆ, 7 ಜಿಲ್ಲೆಗಳ ವ್ಯಾಪ್ತಿಯ ಎತ್ತಿನಹೊಳೆ ಕುಡಿಯುವ ನೀರು ಯೋಜನೆ ಹಾಗೂ ಚಿಕ್ಕಮಗಳೂರು, ದಾವಣಗೆರೆ ಸೇರಿದಂತೆ 4 ಜಿಲ್ಲೆಗಳ ವ್ಯಾಪ್ತಿಯ ಭದ್ರಾ ನೀರಾವರಿ ಯೋಜನೆ, ಅರಣ್ಯ ತೀರುವಳಿ ಮತ್ತು ಭೂ ಸ್ವಾಧೀನ ಪ್ರಸ್ತಾವಗಳಿಗೆ ಒಪ್ಪಿಗೆ ಪಡೆಯಲು, ಬೆಂಗಳೂರಿನ ವಿಕಾಸಸೌಧದಲ್ಲಿ, ಬೃಹತ್ ಮತ್ತು ಮಧ್ಯಮ ನೀರಾವರಿ ಖಾತೆ ಸಚಿವ ಡಿ.ಕೆ.ಶಿವಕುಮಾರ್, ಸಚಿವರು ಹಾಗೂ ಹಿರಿಯ ಅಧಿಕಾರಿಗಳ ಸಭೆ ನಡೆಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎತ್ತಿನಹೊಳೆ ಮತ್ತು ಭದ್ರಾ ಮಹಾತ್ವಾಕಾಂಕ್ಷೆ ಯೋಜನೆಗಳು. ಉನ್ನತಮಟ್ಟದ ತಜ್ಞರ ಸಮಿತಿ ರಚಿಸಿ, ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸರ್ಕಾರ ನಿಶ್ಚಯಿಸಿದೆ. ಯೋಜನೆ ಪೂರ್ಣಗೊಳಿಸಲು, 500 ಎಕರೆ ಜಮೀನು ಬೇಕಿದೆ. ಅರಣ್ಯ ವ್ಯಾಪ್ತಿಯ ಭೂಮಿಯನ್ನು ಯೋಜನೆಗಾಗಿ ಪಡೆದುಕೊಂಡು, ಪರ್ಯಾಯವಾಗಿ ಕಂದಾಯ ಇಲಾಖೆ ಜಮೀನನ್ನು, ಒದಗಿಸಲಾಗುವುದು ಎಂದು, ತಿಳಿಸಿದರು.

ಹರ್ಷ/ಹೊಂಗಲ್/ಡಿಡಿ ಚಂದನ/ಸಚಿವರ ಎಕ್ಸ್ ಖಾತೆ

ಪ್ರದೇಶ ಸಮಾಚಾರ
**14.06.2024**
ಶೆಟ್ಟರ್/ಬೊಮ್ಮಾಯಿ/ಪ್ರಿಯಾಂಕಾ

ಮಲಪ್ರಭೆಯ ಮೂಲಕ, ಹುಬ್ಬಳ್ಳಿ–ಧಾರವಾಡಕ್ಕೆ, ಕುಡಿಯುವ ನೀರು ಹಾಗೂ ನರಗುಂದ ಭಾಗದ ಕೃಷಿಗೆ ನೀರು ಒದಗಿಸುವ, ಮಹತ್ವಾಕಾಂಕ್ಷೆಯ ಕಳಸಾ ಬಂಡೂರಿ ನಾಲಾ ಯೋಜನೆಯ ಅನು ್ಠಾನಕ್ಕೆ, ಯೋಜಿತ ಪ್ರಯತ್ನ ಕೈಗೊಳ್ಳುವುದಾಗಿ ಬೆಳಗಾವಿ ಸಂಸದ ಜಗದೀಶ ಶೆಟ್ಟರ್ ತಿಳಿಸಿದ್ದಾರೆ.

ಬೆಳಗಾವಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಕಳಸಾ–ಬಂಡೂರಾ ಯೋಜನೆಗೆ, ಪರಿಸರ ಮತ್ತು ವನ್ಯಜೀವಿ ಸಂರಕ್ಷಣಾ ಇಲಾಖೆಯ ಅನುಮತಿ ಬಾಕಿ ಇದೆ. ಸಂಬಂಧಪಟ್ಟ ಎಲ್ಲ ಇಲಾಖೆಗಳು ಹಾಗೂ ಸಚಿವರೊಂದಿಗೆ ಸಮಾಲೋಚಿಸುವುದಾಗಿ, ಶೆಟ್ಟರ್ ಹೇಳಿದರು.

ಗೋಕಾಕ ಜಲಪಾತ ಹಾಗೂ ಸವದತ್ತಿಯ ಯಲ್ಲಮ್ಮನ ಗುಡ್ಡವನ್ನು, ಪ್ರವಾಸೋದ್ಯಮದ ದೃಷ್ಟಿಯಿಂದ ಅಭಿವೃದ್ಧಿ ಪಡಿಸುವುದಾಗಿ, ನುಡಿದರು.

<><><>

ಹಾವೇರಿ ಗದಗ ಲೋಕಸಭಾ ಕ್ಷೇತ್ರದ ಅಭಿವೃದ್ಧಿಗೆ, 100 ದಿನಗಳ ಕಾರ್ಯಕ್ರಮ ಯೋಜಿಸಿ, ಸೂಕ್ತ ಅನುದಾನ ಮೀಸಲಿರಿಸಲು ತೀರ್ಮಾನಿಸಲಾಗಿದೆ ಎಂದು, ಹಾವೇರಿ ಗದಗ ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಹಾವೇರಿ ಜಿಲ್ಲೆ ಶಿಗ್ಗಾವಿಯಲ್ಲಿ, ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

<><><>

ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಗಳ ಬಗ್ಗೆ, ಲೋಕಸಭೆಯಲ್ಲಿ ಕೇಂದ್ರ ಸರ್ಕಾರದ ಗಮನ ಸೆಳೆಯುವುದಾಗಿ, ಚಿಕ್ಕೋಡಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ದಾವಣಗೆರೆಯಲ್ಲಿ ಹೇಳಿದ್ದಾರೆ.

ಹರ್ಷ/ಹೊಂಗಲ್/ಟಿಟಿಸಿ ಬೆಳಗಾವಿ/ಹಾವೇರಿ/ದಾವಣಗೆರೆ/ಜಿಲ್ಲಾವಾರು ಕ.ವಾ.ಇ.ಕ.

ಪ್ರದೇಶ ಸಮಾಚಾರ
**14.06.2024**
ಬೋಸ್‌ರಾಜು/ಶ್ಲಾಘನೆ

ರಾಯಚೂರಿನ ಸಿರವಾರ ತಾಲೂಕಿನ, ಹುಡಾ ಗ್ರಾಮದ ಹಳ್ಳಕ್ಕೆ, ಎರಡು ಕೋಟಿ ಐವತ್ತು ಲಕ್ಷ ರೂಪಾಯಿ ವೆಚ್ಚದಲ್ಲಿ, ತಡೆ ಅಣೆಕಟ್ಟೆ ನಿರ್ಮಿಸಿದ್ದು, ಈ ಭಾಗದ ಸಣ್ಣ ಹಿಡುವಳಿ ಹೊಂದಿದ, ರೈತರ ಬದುಕನ್ನು ಕಟ್ಟಿಕೊಟ್ಟಿದೆ ಎಂದು, ಸಣ್ಣ ನೀರಾವರಿ ಖಾತೆ ಸಚಿವ ಎನ್.ಎಸ್.ಬೋಸರಾಜು, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರಕಟಿಸಿದ್ದಾರೆ.

ಮಾನ್ವಿ ಶಾಸಕ ಜಿ. ಹಂಪಯ್ಯ ನಾಯಕ್ ಅವರ ಸಹಕಾರದಲ್ಲಿ, ಯೋಜಿಸಿ ಅನುಷ್ಠಾನಗೊಳಿಸಲಾದ ಈ ಚೆಕ್ ಡ್ಯಾಮ್ ಯೋಜನೆಯಿಂದ, ಸಾವಿರಾರು ರೈತರಿಗೆ ಅನುಕೂಲವಾಗಿದೆ. ಅವರ ಬದುಕಿನಲ್ಲಿ, ಮಂದಹಾಸ ಮೂಡಿದೆ. ಗ್ರಾಮಸ್ಥರು ಅಭಿನಂದಿಸಿದ್ದು, ತಮ್ಮಲ್ಲಿ ಸಾರ್ಥಕ್ಯ ಭಾವ ಮೂಡಿಸಿದೆ ಎಂದಿದ್ದಾರೆ.

ಹರ್ಷ/ಹೊಂಗಲ್/ಸಚಿವರ ಎಕ್ಸ್ ಜಾಲತಾಣ

ಪ್ರದೇಶ ಸಮಾಚಾರ
**14.06.2024**
ಮಾತೃ/ದತ್ತು

ಗರ್ಭಿಣಿ ತಾಯಂದಿರ ಆರೋಗ್ಯವನ್ನು, ಕಾಪಾಡುವ ದೃಷ್ಟಿಯಿಂದ ಜಾರಿಗೊಂಡ, 'ಗರ್ಭಿಣಿಯರ ಆರೋಗ್ಯದ ದತ್ತು ಯೋಜನೆ' ಉತ್ತರ ಕನ್ನಡ ಜಿಲ್ಲೆಯಲ್ಲಿ, ಮಾದರಿಯಾಗಿ ಅನುಷ್ಠಾನಗೊಂಡಿದೆ.

ಈ ಯೋಜನೆಯಡಿ ಫಲಾನುಭವಿಗಳಾದ, ಗರ್ಭಿಣಿಯರಿಗೆ ಸುರಕ್ಷಿತ ಹೆರಿಗೆಯಾಗಿದ್ದು, ತಾಯಿ–ಮಗುವಿನ ಮರಣವನ್ನು ಕಾಳಜಿ ಪೂರ್ವಕ ತಡೆಯಲಾಗಿದೆ.

ಸೆಪ್ಟೆಂಬರ್ 2023 ರಲ್ಲಿ, 'ಗರ್ಭಿಣಿಯರ ಆರೋಗ್ಯದ ದತ್ತು ಯೋಜನೆ' ಅಡಿ ಗುರುತಿಸಲಾಗಿದ್ದ, 345 ಗರ್ಭಿಣಿಯರಿಗೆ ಮೇ 2024ರ ವೇಳೆಗೆ, ಸುರಕ್ಷಿತವಾಗಿ ಹೆರಿಗೆಯಾಗಿದ್ದು, ತಾಯಿ ಮತ್ತು ಮಗು ಇಬ್ಬರೂ ಆರೋಗ್ಯವಾಗಿದ್ದಾರೆ.

ವಿವಿಧ ಆರೋಗ್ಯ ಸಮಸ್ಯೆಗಳಿಂದಾಗಿ, 13 ಗರ್ಭಿಣಿಯರಿಗೆ ಗರ್ಭಪಾತವಾಗಿದೆ. 121 ತಾಯಂದಿರಿಗೆ ಸಿಸೇರಿಯನ್ ಹೆರಿಗೆ ಹಾಗೂ 224 ಗರ್ಭಿಣಿಯರಿಗೆ ಸಾಮಾನ್ಯ ಹೆರಿಗೆಯಾಗಿದೆ ಎಂದು, ವಾರ್ತಾ ಇಲಾಖೆ ಪ್ರಕಟಿಸಿದೆ.

ಹರ್ಷ/ಹೊಂಗಲ್/ಕೆ.ವಾ.ಇ.ಬೆಂ. ಎಕ್ಸ್ ಖಾತೆ

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಪ್ರದೇಶ ಸಮಾಚಾರ
**14.06.2024**
ಖೇಲೋ ಇಂಡಿಯಾ/ಮಲ್ಲ ಕಂಬ

ಖೇಲೋ ಇಂಡಿಯಾ ಹಾಗೂ ಭಾರತೀಯ ಕ್ರೀಡಾ ಪ್ರಾಧಿಕಾರ, ರಾಜ್ಯ ಮಟ್ಟದ ಮಲ್ಲಕಂಬ ತರಬೇತಿಗೆ, ರಾಮನಗರದ ಕರ್ನಾಟಕ ಸಾಹಸ ಕಲಾ ಅಕಾದೆಮಿಗೆ ಮಾನ್ಯತೆ ನೀಡಿವೆ. ರಾಜ್ಯ ಮತ್ತು ರಾ ್ಟ್ರ ಮಟ್ಟದ ಖೇಲೋ ಇಂಡಿಯಾ ಸ್ಪರ್ಧೆಗಳಲ್ಲಿ ಭಾಗವಹಿಸಲು, ಮಲ್ಲಕಂಬ ಪಟುಗಳಿಗೆ ಅವಕಾಶ ಸಿಗಲಿದೆ ಎಂದು, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು, ತಿಳಿಸಿದ್ದಾರೆ.

ರಾಷ್ಟ್ರ ಮಟ್ಟದ ಮಲ್ಲಕಂಬ ಕೋಚ್‌ಗಳಿಂದ, 14 ರಿಂದ 16 ವ ್ಷ ವಯೋಮಾನದ ಕಿಶೋರ, ಕಿಶೋರಿಯರು ತರಬೇತಿ ಪಡೆಯಬಹುದು. ಶಾಲಾ ಮಕ್ಕಳಿಗೆ ಮಲ್ಲಕಂಬ ತರಬೇತಿ ಉಚಿತವಾಗಿದೆ. ತರಬೇತಿ ಅವಧಿ ನಿತ್ಯ ಸಂಜೆ 4 ರಿಂದ 6 ಗಂಟೆ. ಹೊರ ಜಿಲ್ಲೆಯ ಮಲ್ಲಕಂಬ ಆಸಕ್ತ ಮಕ್ಕಳಿಗೆ, ವಸತಿ ನಿಲಯದ ವ್ಯವಸ್ಥೆ ಇದೆ.

ಹರ್ಷ/ಹೊಂಗಲ್/ಟಿಟಿಸಿ ರಾಮನಗರ

ಪ್ರದೇಶ ಸಮಾಚಾರ
**14.06.2024**
ರಕ್ತ/ದಾನಿ/ದಿನ

ಇಂದು, ವಿಶ್ವ ರಕ್ತದಾನಿಗಳ ದಿನ.

ಜಗತ್ತಿನಾದ್ಯಂತ ರಕ್ತದಾನದ ಮಹತ್ವದ ಬಗ್ಗೆ ಜನ ಜಾಗೃತಿ ಮೂಡಿಸಲು, ತುರ್ತು ಸಂದರ್ಭಗಳಲ್ಲಿ ರಕ್ತದಾನಿಗಳ ಮೂಲಕ ರಕ್ತ ಸಂಗ್ರಹಿಸಲು ಹಾಗೂ ಅವರ ಮಾನವೀಯ ಕಾರ್ಯವನ್ನು ಪ್ರಶಂಸಿಸಲು, ಪ್ರತಿ ವರ್ಷ ಜೂನ್ **14** ರಂದು, ವಿಶ್ವ ರಕ್ತದಾನಿಗಳ ದಿನವನ್ನು ಆಚರಿಸಲಾಗುತ್ತದೆ.

ವಿಶ್ವ ಆರೋಗ್ಯ ಸಂಸ್ಥೆ, ಮುಂದಾಳತ್ವದಲ್ಲಿ, ಕಳೆದ ಎರಡು ದಶಕಗಳ ರಕ್ತದಾನವನ್ನು ಆಚರಿಸೋಣ; ಎಲ್ಲ ರಕ್ತದಾನಿಗಳಿಗೆ ಧನ್ಯವಾದಗಳು!

ಸಾರ್ವತ್ರಿಕವಾಗಿ ಸುರಕ್ಷಿತ ರಕ್ತ ವರ್ಗಾವಣೆ ಖಾತ್ರಿ ಪಡಿಸಿ, ರಕ್ತದಾನವನ್ನು ವೇಗಗೊಳಿಸಲು ಸಕಾಲಿಕ ದಿನವಾಗಿ, ಆಚರಿಸಲಾಗುತ್ತದೆ.

ಹರ್ಷ/ಹೊಂಗಲ್/ಗೂಗಲ್/ಡಾ. ಉಮೇಶ ಹಳ್ಳಿಕೇರಿ

ಪ್ರದೇಶ ಸಮಾಚಾರ
**14.06.2024**
ಅಂಕಿತಾ/ಸಿದ್ದು/ಶ್ಲಾಘನೆ

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇಕಡ **100** ಅಂಕ ಗಳಿಸಿ, ರಾಜ್ಯಕ್ಕೆ ಮೊದಲ ಸ್ಥಾನ ಪಡೆದ, ಬಾಗಲಕೋಟೆ ಜಿಲ್ಲೆ ಮೆಳ್ಳಿಗೇರಿಯ, ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿ, ಅಂಕಿತಾ ಬಸಪ್ಪ ಕೊಣ್ಣೂರ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು, ತಮ್ಮನ್ನು ಬೆಂಗಳೂರಿಗೆ ಆಹ್ವಾನಿಸಿ, ಸನ್ಮಾನಿಸಿದ್ದಕ್ಕೆ ಕೃತಜ್ಞತೆ ಸೂಚಿಸಿದ್ದಾರೆ.

ಮುಖ್ಯಮಂತ್ರಿಯವರು, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಸ್ಥಾಪನೆಯ ರೂವಾರಿ ಎಂಬುದು ತಮಗೆ ಹರ್ಷ ಉಂಟುಮಾಡಿದೆ. ಈ ಶಾಲೆಗಳಿಂದ ಅನೇಕ ಬಡ ಪ್ರತಿಭೆಗಳಿಗೆ ಶಿಕ್ಷಣ ದೊರಕಿ, ಬಾಳಿಗೆ ದಾರಿದೀಪವಾಗಿವೆ ಎಂದು, ಅಕ್ಷತಾ ಬಣ್ಣಿಸಿದ್ದಾರೆ.

<><><>

ರಾಜ್ಯಾದ್ಯಂತ ಇಂದಿನಿಂದ, ದಿನಾಂಕ **22**ರ ವರೆಗೆ, ಬೆಳಗ್ಗೆ **10** ಗಂಟೆ **15** ನಿಮಿಷದಿಂದ, ಮಧ್ಯಾಹ್ನ **1.45**ರ ವರೆಗೆ, ಎಸ್.ಎಸ್.ಎಲ್.ಸಿ. ಪೂರಕ ಪರೀಕ್ಷೆಗಳು ನಡೆಯಲಿವೆ.

ರಾಜ್ಯದ **35** ಶೈಕ್ಷಣಿಕ ಜಿಲ್ಲೆಗಳ, **2** ಲಕ್ಷದ **23** ಸಾವಿರದ **308** ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದಾರೆ. ಒಂದು ಲಕ್ಷದ **44** ಸಾವಿರದ **160** ಬಾಲಕರು ಮತ್ತು **79** ಸಾವಿರದ **148** ಬಾಲಕಿಯರು ಸೇರಿದ್ದಾರೆ.

ಹರ್ಷ/ಹೊಂಗಲ್/ಕೆ.ವಾ.ಇ.ಬೆಂ/ಎಚ್.ಆರ್.ಸುಧೀಂದ್ರ

ಪ್ರದೇಶ ಸಮಾಚಾರ
**14.06.2024**
ಡೆಂಘಿ/ಪರಿಶೀಲನೆ

ಧಾರವಾಡ ತಾಲೂಕಿನ ಮುಮ್ಮಿಗಟ್ಟಿ ಗ್ರಾಮದಲ್ಲಿ, ಡೆಂಘಿ ಜ್ವರ ಶಂಕಿತ ಬಾಲಕಿ ಸಾವು ಪ್ರಕರಣ ಹಾಗೂ ಡೆಂಘಿ ಶಂಕಿತ 7 ಪ್ರಕರಣಗಳು ಪತ್ತೆಯಾಗಿವೆ.

ಜಿಲ್ಲಾಧಿಕಾರಿ ದಿವ್ಯಾ ಪ್ರಭು ಅವರ ನಿರ್ದೇಶನದ ಮೇರೆಗೆ, ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ಶಶಿ ಪಾಟೀಲ ಮತ್ತು ಉಪವಿಭಾಗಾಧಿಕಾರಿ ಶಾಲಂ ಹುಸೇನ ಅವರು, ಮುಮ್ಮಿಗಟ್ಟಿ ಗ್ರಾಮಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

21 ಜನ ಆಶಾ ಕಾರ್ಯಕರ್ತೆರು, ಗ್ರಾಮದ ಪ್ರತಿ ಮನೆಗೆ ಹೋಗಿ, ಆರೋಗ್ಯ ಸಮೀಕ್ಷೆ ಕೈಗೊಂಡು, ಕೀಟ ಜನ್ಯ ರೋಗಗಳಾದ ಡೆಂಘಿ, ಚಿಕೂನ್ ಗುನ್ಯ ಬಗ್ಗೆ ಜನ ಜಾಗೃತಿ ಕೈಗೊಂಡಿದ್ದಾರೆ.

ಹರ್ಷ/ಹೊಂಗಲ್/ಕೆ.ವಾ.ಇ.ಧಾ.

ಪ್ರದೇಶ ಸಮಾಚಾರ
**14.06.2024**
ಪರಮೇಶ್ವರ/ಕಲುಷಿತ ನೀರು

ತುಮಕೂರು ಜಿಲ್ಲೆ, ಮಧುಗಿರಿ ತಾಲೂಕು ಚಿನ್ನೇನಹಳ್ಳಿಯಲ್ಲಿ, ಜಾತ್ರಾ ಮಹೋತ್ಸವದಲ್ಲಿ, ಕಲುಷಿತ ನೀರು ಸೇವಿಸಿ, ಇಬ್ಬರು ಮೃತಪಟ್ಟು, ನೂರಕ್ಕೂ ಹೆಚ್ಚು ಜನ ಅಸ್ವಸ್ಥಗೊಂಡಿದ್ದಾರೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಜಿ. ಪರಮೇಶ್ವರ್ ತಿಳಿಸಿದ್ದಾರೆ.

ತುಮಕೂರು ನಗರದ ಜಿಲ್ಲಾಸ್ಪತ್ರೆಗೆ ಗುರುವಾರ ಭೇಟಿ ನೀಡಿದ ಸಚಿವರು, ಅಸ್ವಸ್ಥರ ಯೋಗಕ್ಷೇಮ ವಿಚಾರಿಸಿದರು.

ಕುಡಿಯುವ ನೀರು ಪೂರೈಸುವ ಕೊಳವೆ ಒಡೆದು, ಕಲುಷಿತ ನೀರು ಮಿಶ್ರಣಗೊಂಡಿದೆ. ಅದನ್ನು ಸೇವಿಸಿ ಜನ ಅಸ್ವಸ್ಥಗೊಂಡಿದ್ದಾರೆ. ಸಂಬಂಧಿತ ಪಿ.ಡಿ.ಓ. ಹಾಗೂ ನೀರಘಂಟಿಯನ್ನು ಅಮಾನತು ಗೊಳಿಸಿದ್ದಾಗಿ, ಹೇಳಿದರು.

ಹರ್ಷ/ಹೊಂಗಲ್/ಪಿಟಿಸಿ ತುಮಕೂರು

ಪ್ರದೇಶ ಸಮಾಚಾರ
**14.06.2024**
ದಿನೇಶ್/ಕ್ಲಬ್

ಪ್ರತಿಯೊಬ್ಬರಿಗೂ, ಗುಣಮಟ್ಟದ ಉತ್ತಮ ವೈದ್ಯಕೀಯ ಸೇವೆ ಹಾಗೂ ಸೌಲಭ್ಯ ಒದಗಿಸುವ ಉದ್ದೇಶದಿಂದ ಪ್ರಾರಂಭಗೊಂಡ, 'ನಮ್ಮ ಕ್ಲಿನಿಕ್'ಗೆ ಈಗ ನೂತನ ಆಯಾಮ ನೀಡಲು ನಿರ್ಧರಿಸಲಾಗಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ವಿಕಾಸಸೌಧದಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಸಚಿವರು ಸಭೆ ನಡೆಸಿದರು.

ಈಗಾಗಲೇ ರಾಜ್ಯದಲ್ಲಿ **503** 'ನಮ್ಮ ಕ್ಲಿನಿಕ್'ಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಇವುಗಳನ್ನು ಮತ್ತ ಸ್ಟ ಸುದೃಢಗೊಳಿಸುವ ನಿಟ್ಟಿನಲ್ಲಿ, ನೂತನ **254** 'ನಮ್ಮ ಕ್ಲಿನಿಕ್'ಗಳನ್ನು ಆರಂಭಿಸಲಾಗುತ್ತಿದೆ. ವಿಶೇ 'ವಾಗಿ ಬಸ್ ನಿಲ್ದಾಣ ಹಾಗೂ ಇತರೆ ಸಾರ್ವಜನಿಕ ಸ್ಥಳಗಳನ್ನು, **15** ದಿನಗಳೊಳಗಾಗಿ ಗುರುತಿಸಿ ವರದಿ ಸಲ್ಲಿಸಲು ಸೂಚಿಸಿದ್ದಾಗಿ, ಸಚಿವ ದಿನೇಶ ಜಾಲತಾಣ ಎಕ್ಸ್ ನಲ್ಲಿ ಪ್ರಕಟಿಸಿದ್ದಾರೆ.

ಹರ್ಷ/ಹೊಂಗಲ್/ಸಚಿವರ ಎಕ್ಸ್ ಜಾಲತಾಣ/ವಿವಿಧ ಪತ್ರಿಕೆಗಳು

ಪ್ರದೇಶ ಸಮಾಚಾರ
**14.06.2024**
ನುಡಿ ನಮನ/ರಾಜೀವ್ ತಾರಾನಾಥ

ಸರೋದ್ ಮಾಂತ್ರಿಕ, ಪದ್ಮಶ್ರೀ ಪುರಸ್ಕೃತ ಪಂಡಿತ ರಾಜೀವ ತಾರಾನಾಥ ಅವರ ಸ್ಮೃತಿಗೆ ಇಂದು ಸಂಜೆ **6** ಗಂಟೆಗೆ, ನುಡಿ ನಮನ ಹಾಗೂ ಶ್ರದ್ಧಾಂಜಲಿ ಸಭೆ, ಧಾರವಾಡದಲ್ಲಿ ಆಯೋಜಿತವಾಗಿದೆ.

ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ. ದೇಶಪಾಂಡೆ ಸಭಾಭವನದಲ್ಲಿ, ಶ್ರೀ ಕುಮಾರೇಶ್ವರ ಕಲ್ಚರಲ್ ಸೊಸೈಟಿ ಸೇರಿದಂತೆ, ವಿವಿಧ ಸಂಗೀತ, ಸಾಹಿತ್ಯ ಪರಿಚಾರಿಕೆಯ ಸಂಸ್ಥೆಗಳ ಸಹಯೋಗದಲ್ಲಿ, ಸಭೆ ಜರುಗಲಿದೆ.

ಹರ್ಷ/ಹೊಂಗಲ್/ಕ.ವಾ.ಇ.ಧಾ./ಕು.ಕ.ಸೊ.ಪ್ರ/ಕ.ವಿ.ವ.ಸಂ.

ಪ್ರದೇಶ ಸಮಾಚಾರ
**14.06.2024**
ವೆಂಕಟೇಶನ್/ಸಫಾಯಿ

ಪೌರ ಕಾರ್ಮಿಕರಿಗೆ ಎಲ್ಲ ಸೌಲಭ್ಯಗಳನ್ನು ಸಕಾಲಿಕವಾಗಿ ಪೂರೈಸುವುದು, ಆಯಾ ಸ್ಥಳೀಯ ಸಂಸ್ಥೆ ಮತ್ತು ಇಲಾಖೆ ಮುಖ್ಯಸ್ಥರ ಕರ್ತವ್ಯ ಎಂದು, ರಾಷ್ಟ್ರೀಯ ಸಫಾಯಿ ಕಾರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ.ವೆಂಕಟೇಶನ್, ಸ್ಪಷ್ಟ ಪಡಿಸಿದ್ದಾರೆ.

ಗದಗ ಹಾಗೂ ಧಾರವಾಡ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ, ಸಫಾಯಿ ಕರ್ಮಚಾರಿಗಳಿಗೆ ಒದಗಿಸಿದ ಸೌಲಭ್ಯ ಮತ್ತು ಸಮಸ್ಯೆಗಳ ಕುರಿತು, ಪರಿಶೀಲನಾ ಸಭೆ ನಡೆಸಿದರು.

ಸಫಾಯಿ ಕರ್ಮಚಾರಿಗಳಿಗೆ ಯಾವುದೇ ತೊಂದರೆಯಾದಲ್ಲಿ, ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಬೇಕು. ಆಯೋಗಕ್ಕೆ ಎನ್.ಸಿ.ಎಸ್.ಕೆ, ವೆಬ್‌ಸೈಟ್ ಮೂಲಕ ದೂರು ದಾಖಲಿಸಬಹುದು. ದೂರವಾಣಿ ಸಂಖ್ಯೆ: 011 – 24648924ಕ್ಕೆ ಮೌಖಿಕವಾಗಿ ದೂರು ನೀಡಬಹುದು ಎಂದು, ಎಂ. ವೆಂಕಟೇಶ ತಿಳಿಸಿದರು.

ಮಹಾನಗರ ಪಾಲಿಕೆಯ 82 ವಾರ್ಡ್‌ಗಳಲ್ಲಿ, ಪೌರ ಕಾರ್ಮಿಕರಿಗಾಗಿ ಭೀಮಾಶ್ರಯ ವಿಶ್ರಾಂತಿ ಕೊಠಡಿಗಳನ್ನು ನಿರ್ಮಿಸಲಾಗಿದೆ ಎಂದು, ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು, ಆಯೋಗದ ಅಧ್ಯಕ್ಷರಿಗೆ ಮಾಹಿತಿ ನೀಡಿದರು.

ಹರ್ಷ/ಹೊಂಗಲ್/ಕೆ.ವಾ.ಇ.ಧಾ./ಗದಗ/ಟಿಟಿಸಿ ಗದಗ

ಪ್ರದೇಶ ಸಮಾಚಾರ
14.06.2024
ವಿಚಾರ ಸಂಕಿರಣ

ವಿಜ್ಞಾನ ಮತ್ತು ತಂತ್ರಜ್ಞಾನ ಕುರಿತ, ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ, ಧಾರವಾಡದ ಕಿಟೆಲ್ ವಿಜ್ಞಾನ ಮಹಾವಿದ್ಯಾಲಯದಲ್ಲಿ ಜರುಗಿತು.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ – ಇಸ್ರೋ, ಚಂದ್ರಯಾನ –3ರ ಸಂದೇಶ ವಾಹಕದ ರೂವಾರಿ, ವಿಜಯನಗರ ಜಿಲ್ಲೆ ಕೊಟ್ಟೂರಿನ ವಿಜ್ಞಾನಿ, ಡಾಕ್ಟರ್ ಡಿ.ಎಚ್.ಎಂ. ದಾರುಕೇಶ ಅವರು, ವಿಚಾರ ಸಂಕಿರಣ ಉದ್ಘಾಟಿಸಿದರು.

ಮುಂಬೈ ಐ.ಐ.ಟಿ.ಯ ಹೆಸರಾಂತ ಸಂಶೋಧಕ ಡಾಕ್ಟರ್ ರವೀಂದ್ರ ಕಾಂಬ್ಳೆ, ಧಾರವಾಡ ಐ.ಐ.ಟಿ. ವಿಸ್ತರಣಾ ವಿದ್ಯಾಧಿಕಾರಿ ಡಾಕ್ಟರ್ ಎಸ್.ಎಂ. ಶಿವಪ್ರಸಾದ್ ಪಾಲ್ಗೊಂಡಿದ್ದರು.

ಹರ್ಷ/ಹೊಂಗಲ್/ಕೆ.ವಿ.ಮ.ಪ್ರ.

ಈಗ ಸಂಕ್ಷಿಪ್ತ ಸುದ್ದಿಗಳು:

ಕರ್ನಾಟಕ ಅರೆಭಾ ಿ ಸಂಸ್ಕೃತಿ ಮತ್ತು ಸಾಹಿತ್ಯ ಅಕಾದೆಮಿ ನೂತನ ಅಧ್ಯಕ್ಷರಾಗಿ, ಸದಾನಂದ ಗೌಡ ಮಾವಜಿ ಅವರು ಮಡಿಕೇರಿಯಲ್ಲಿ, ಅಧಿಕಾರ ಸ್ವೀಕರಿಸಿದ್ದಾರೆ.

ಚಿತ್ರದುರ್ಗ ನಗರಸಭೆ ಸಹಯೋಗದಲ್ಲಿ, ಪದವಿ ಪೂರ್ವ ಕಾಲೇಜಿನ ನಾಲ್ಕು ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು, ವಿಶ್ವ ಪರಿಸರ ದಿನ ಅಂಗವಾಗಿ, ಐತಿಹಾಸಿಕ ಸಂತೆ ಹೊಂಡದ ಸ್ವಚ್ಛತಾ ಕಾರ್ಯ ಕೈಗೊಂಡರು.

ಉತ್ತರಕನ್ನಡ ಜಿಲ್ಲೆಯಲ್ಲಿ, ಕಳೆದ ಜನವರಿಯಿಂದ ಮೇ ವರೆಗೆ, ಸಖಿ ಒನ್ ಸ್ಟಾಪ್ ಸೆಂಟರ್ ನಲ್ಲಿ, 18 ಪೋಕ್ಸೋ ಪ್ರಕರಣಗಳು ದಾಖಲಾಗಿವೆ ಎಂದು, ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ ತಿಳಿಸಿದ್ದಾರೆ.

ಕೊಪ್ಪಳ ಸಂಸದ ಕೆ.ರಾಜಶೇಖರ ಹಿಟ್ನಾಳ ಹಾಗೂ ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಅವರು ಜಂಟಿಯಾಗಿ, ಕೊಪ್ಪಳ ನಗರದ ವಿವಿಧೆಡೆ ಸಂಚರಿಸಿ, ಮಳೆಯಿಂದಾದ ಹಾನಿ ಪರಿಶೀಲಿಸಿದರು.

ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್, ಇಂದು ಬೆಳಗ್ಗೆ 10.45ಕ್ಕೆ ತಾಲೂಕು ಕಚೇರಿಯ ಶಾಸಕರ ಭವನದಲ್ಲಿ, ಸಾರ್ವಜನಿಕರ ಕುಂದುಕೊರತೆ ಆಲಿಸಲಿದ್ದಾರೆ.

ರಾಜ್ಯದ ಪ್ರವಾಸಿ ತಾಣಗಳು ಹಾಗೂ ಚಿಕ್ಕಬಳ್ಳಾಪುರದ ಪ್ರವಾಸಿ ತಾಣಗಳಲ್ಲಿ ಪ್ರವಾಸಿ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸಲು, ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ತಿಳಿಸಿದ್ದಾರೆ.

ರಾಜ್ಯದ ಹೈನುಗಾರರಿಗೆ, ರಾಜ್ಯ ಸರ್ಕಾರ ನೀಡುತ್ತಿದ್ದ, 5 ರೂಪಾಯಿ ಹಾಲಿನ ಪ್ರೋತ್ಸಾಹ ಧನ, 7 ತಿಂಗಳಿನಿಂದ ಬಿಡುಗಡೆಯಾಗಿಲ್ಲ. ಸರ್ಕಾರ ಕೂಡಲೇ ಪಾವತಿಸಬೇಕು ಎಂದು ಚಿಕ್ಕಬಳ್ಳಾಪುರ ಸಂಸದ ಕೆ.ಸುಧಾಕರ್ ಆಗ್ರಹಿಸಿದ್ದಾರೆ.

ಮಹಾತ್ಮ ಗಾಂಧಿ ನರೇಗಾ ಯೋಜನೆ ಅಡಿ, ಮೇವು ಬೆಳೆಸಲು, ಒಂದು ಎಕರೆಗೆ 20 ಸಾವಿರ ರೂಪಾಯಿ ಸಹಾಯ ಧನ, ಮೇವಿನ ಬೀಜ ಮತ್ತು ಉಪಕರಣ ನೀಡಲಿದೆ ಎಂದು, ಕೋಲಾರ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶಿವಕುಮಾರ್ ತಿಳಿಸಿದ್ದಾರೆ.

ಯಾದಗಿರಿ ಜಿಲ್ಲೆಯ, ಎಲ್ಲ ರೈತ ಸಂಪರ್ಕ ಕೇಂದ್ರಗಳಲ್ಲಿ, ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಲಭ್ಯ ಎಂದು, ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆ.ಎಚ್.ರವಿ ತಿಳಿಸಿದ್ದಾರೆ.

ವಿಜಯನಗರ ಜಿಲ್ಲೆಯ, ಕೂಡ್ಲಿಗಿ ತಾಲೂಕಿನಲ್ಲಿ ಬಿತ್ತನೆಗೆ, ರಿಯಾಯಿತಿ ದರದಲ್ಲಿ ಶೇಂಗಾ ಬೀಜವನ್ನು ವಿತರಿಸಲಾಗುತ್ತಿದೆ ಎಂದು, ಕೂಡ್ಲಿಗಿ ಶಾಸಕ ಎನ್. ಟಿ. ಶ್ರೀನಿವಾಸ್ ಹೇಳಿದ್ದಾರೆ.

ವಿಜಯಪುರದಿಂದ, ಮಮ್ಮುಟ್ಟಿಗುಡ್ಡದ ಅಮೋಘಸಿದ್ದೇಶ್ವರ ದೇವಸ್ಥಾನಕ್ಕೆ, ನೂತನ ಸಂಚಾರ ಹೊಸದಾಗಿ ಆರಂಭಿಸಲಾಗಿದೆ. ಪ್ರತಿ ದಿನ ಬೆಳಗ್ಗೆ 8, ಮಧ್ಯಾಹ್ನ 1 ಹಾಗೂ ಸಂಜೆ 5 ಗಂಟೆಗೆ, ಬಸ್ ಹೊರಡಲಿದೆ.

ಹರ್ಷ/ಹೊಂಗಲ್/ಕೆ.ವಾ.ಇ.ಬೆಂ./ಜಿಲ್ಲಾವಾರು ಪಿಟಿಸಿ

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಮುಂಗಾರು ಕೃಷಿ ಹಂಗಾಮಿಗೆ, ಬೇಡಿಕೆಗಿಂತಲೂ ಹೆಚ್ಚು ಬಿತ್ತನೆ ಬೀಜ ಹಾಗೂ ರಸಗೊಬ್ಬರ ದಾಸ್ತಾನು ಲಭ್ಯ – ಎನ್.ಚಲುವರಾಯಸ್ವಾಮಿ.
- ಎತ್ತಿನಹೊಳೆ ಹಾಗೂ ಭದ್ರಾ ಮೇಲ್ದಂಡೆ ಯೋಜನೆ: ಉನ್ನತಮಟ್ಟದ ತಜ್ಞರ ಸಮಿತಿ ರಚನೆ – ಡಿ.ಕೆ.ಶಿವಕುಮಾರ್.
- 'ಗರ್ಭಿಣಿಯರ ಆರೋಗ್ಯದ ದತ್ತು ಯೋಜನೆ': ಉತ್ತರ ಕನ್ನಡ ಜಿಲ್ಲೆಯಲ್ಲಿ, ಮಾದರಿ ಅನುಷ್ಠಾನ.
- ಖೇಲೋ ಇಂಡಿಯಾದಿಂದ, ಮಲ್ಲಕಂಬ ತರಬೇತಿಗೆ, ರಾಮನಗರ ಸಾಹಸ ಕಲಾ ಅಕಾದೆಮಿಗೆ, ರಾಷ್ಟ್ರೀಯ ಮಾನ್ಯತೆ.
- ಇಂದು, ವಿಶ್ವ ರಕ್ತದಾನಿಗಳ ದಿನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ

**ADDITIONAL NEWS PIECES -**

ಪ್ರದೇಶ ಸಮಾಚಾರ
**14.06.2024**
ರೇಣುಕಾಸ್ವಾಮಿ/ವಿಜಯೇಂದ್ರ

ಚಿತ್ರದುರ್ಗದ ರೇಣುಕಾಸ್ವಾಮಿ ಅವರ ಅಮಾನುಷ ಸಾವಿಗೆ, ನ್ಯಾಯ ಸಿಗಲಿ; ಕುಟುಂಬದವರಿಗೆ ದುಃಖ ಭರಿಸುವ ಶಕ್ತಿಯನ್ನು, ಭಗವಂತ ಕರುಣಿಸಲಿ, ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಹೇಳಿದ್ದಾರೆ.

ನಟ ದರ್ಶನ್ ಸೇರಿದಂತೆ, ಇತರರ ಮೇಲಿನ ಆರೋಪ ಅತ್ಯಂತ ಕಳವಳಕಾರಿ. ಸರ್ಕಾರ ತಪ್ಪಿತಸ್ಥರಿಗೆ ಕಾನೂನಿನಡಿ ಕಠಿಣ ಶಿಕ್ಷೆ ಆಗುವಂತೆ, ಕ್ರಮಕೈಗೊಳ್ಳಲು ಒತ್ತಾಯಿಸಿದ್ದಾರೆ.

ಹರ್ಷ/ಹೊಂಗಲ್/ಎಕ್ಸ್ ಖಾತೆ

ಪ್ರದೇಶ ಸಮಾಚಾರ
**14.06.2024**
ಪಿಓಪಿ/ಖಂಡ್ರೆ

ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿ.ಒ.ಪಿ.) ಗಣಪತಿ ಮೂರ್ತಿಗಳ ವಿಸರ್ಜನೆಯಿಂದ, ಜಲಮೂಲಗಳು ಕಲುಷಿತಗೊಳ್ಳುತ್ತಿವೆ. ಹೀಗಾಗಿ, ಈ ಬಾರಿ ತಯಾರಿಕೆ ಮತ್ತು ಮಾರಾಟ ಎರಡನ್ನೂ ನಿಷೇಧಿಸಲಾಗಿದೆ ಎಂದು, ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಸ್ಪಷ್ಟ ಪಡಿಸಿದ್ದಾರೆ.

ಈ ವರ್ಷ ಗಣಪತಿ ಮೂರ್ತಿಕಾರರು ತಯಾರಿಕೆಯಲ್ಲಿ ತೊಡಗುವ ಮೊದಲೇ, ನೋಟಿಸ್ ನೀಡಲು, ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು, ಜಾಲತಾಣ ಎಕ್ಸ್ ನಲ್ಲಿ ಪ್ರಕಟಿಸಿದ್ದಾರೆ.

ಹರ್ಷ/ಹೊಂಗಲ್/ಕೆ.ವಾ.ಇ.ಬೆಂ. ಎಕ್ಸ್ ಖಾತೆ/ಸಚಿವರ ಎಕ್ಸ್ ಖಾತೆ

ಪ್ರದೇಶ ಸಮಾಚಾರ
**14.06.2024**
ಡೆಂಘಿ/ಚಿಕಿತ್ಸೆ

ಹಾವೇರಿ ಜಿಲ್ಲೆಯಾದ್ಯಂತ, ಕಳೆದ ಜನವರಿಯಿಂದ ಜೂನ್ **11**ರ ವರೆಗೆ, **272** ಡೆಂಘಿ ಪ್ರಕರಣಗಳು ದೃಢಪಟ್ಟಿವೆ. ಆ ಪೈಕಿ **267** ಮಂದಿ ಚಿಕಿತ್ಸೆ ಪಡೆದು ಗುಣಮುಖರಾಗಿದ್ದಾರೆ. ಇಬ್ಬರು ಬಾಲಕರು ಮೃತಪಟ್ಟಿದ್ದಾರೆ. ಮೂವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು, ಜಿಲ್ಲಾ ಆರೋಗ್ಯಾಧಿಕಾರಿ, ಡಾಕ್ಟರ್ ಜಯಾನಂದ ಮಾಹಿತಿ ನೀಡಿದ್ದಾರೆ.

<><><>

ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕು ಆಸ್ಪತ್ರೆಯ, ಡಯಾಲಿಸಿಸ್ ವಿಭಾಗದ ಸಿಬ್ಬಂದಿ **35** ವರ್ಷದ ನಾಗರಾಜ್, ಶಿವಮೊಗ್ಗದ ಖಾಸಗಿ ಆಸ್ಪತ್ರೆಯಲ್ಲಿ ಡಿಂಘಿ ಜ್ವರದಿಂದ ಮೃತ ಪಟ್ಟಿದ್ದಾಗಿ, ಸಾಗರ ತಾಲೂಕು ವೈದ್ಯಾಧಿಕಾರಿ ಡಾಕ್ಟರ್ ಪರಪ್ಪ ದೃಢಪಡಿಸಿದ್ದಾರೆ.

<><><>

ಹರ್ಷ/ಹೊಂಗಲ್/ಟಿಟಿಸಿ ಹಾವೇರಿ/ಶಿವಮೊಗ್ಗ

ಪ್ರದೇಶ ಸಮಾಚಾರ
**14.06.2024**
ಕೆಳದಿಮಠ/ಶಿಕ್ಷಣ

ಗುಣಮಟ್ಟದ ಶೈಕ್ಷಣಿಕ ಬೆಳವಣಿಗೆಯಲ್ಲಿ, ಮೇಲ್ವಿಚಾರಣಾಧಿಕಾರಿಗಳ ಪಾತ್ರ ತುಂಬ ಮಹತ್ವದ್ದಾಗಿದೆ; **2024**ರ ಶೈಕ್ಷಣಿಕ ಬಲವರ್ಧನಾ ವರ್ಷದ ಗುರಿ ಸಾಧಿಸಲು, ಯೋಜಿತ ಪ್ರಯತ್ನ ಕೈಗೊಳ್ಳುವಂತೆ, ಶಾಲಾ ಶಿಕ್ಷಣ ಇಲಾಖೆ, ಧಾರವಾಡ ಆಡಳಿತ ವಿಭಾಗದ ಉಪನಿರ್ದೇಶಕ ಎಸ್.ಎಸ್.ಕೆಳದಿಮಠ ಸೂಚಿಸಿದ್ದಾರೆ.

ಡಯಟ್ ವತಿಯಿಂದ, ಧಾರವಾಡ ಜಿಲ್ಲೆಯ ಎಲ್ಲ ಶೈಕ್ಷಣಿಕ ಮೇಲುಸ್ತುವಾರಿ ಅಧಿಕಾರಿಗಳಿಗೆ ಏರ್ಪಡಿಸಿದ್ದ, ಶಾಲಾ ಹಂತದ ತರಬೇತಿ, ಶಾಲಾ ಭೇಟಿ ಮತ್ತು ಪೂರಕ ವ್ಯವಸ್ಥೆ ಕುರಿತ, ತರಬೇತಿ ಕಾರ್ಯಾಗಾರ ಉದ್ಘಾಟಿಸಿ, ಅವರು ಮಾತನಾಡಿದರು.

ಹರ್ಷ/ಹೊಂಗಲ್/ಕೆ.ವಾ.ಇ.ಧಾ.

ಪ್ರದೇಶ ಸಮಾಚಾರ
**14.06.2024**
ಯೋಗ/ದಿನ/ಸಿದ್ಧತೆ

ಇದೇ **21**ನೇ ತಾರೀಖು ಶುಕ್ರವಾರ, ವಿಶ್ವಾದ್ಯಂತ **10**ನೇ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಗುತ್ತಿದೆ.

ಪ್ರಸಕ್ತ ವರ್ಷದ ಯೋಗ ದಿನಾಚರಣೆಯ ಧ್ಯೇಯವಾಕ್ಯ, 'ಮಹಿಳಾ ಸಬಲೀಕರಣಕ್ಕಾಗಿ ಯೋಗ' ಎಂದು, ಘೋಷಿಸಲಾಗಿದೆ.

ಯೋಗ ದಿನ ಸಮೀಪಿಸುತ್ತಿರುವ ಹಿನ್ನೆಲೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ತಾಡಾಸನದ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ.

ತಾಡಾಸನದ ಭಂಗಿ ಹಾಗೂ ಈ ಆಸನದಿಂದ ಆರೋಗ್ಯದ ಮೇಲಾಗುವ ಪ್ರಯೋಜನದ ಕುರಿತು ಈ ವಿಡಿಯೋದಲ್ಲಿ ತಿಳಿಸಲಾಗಿದೆ.

ಹರ್ಷ/ಹೊಂಗಲ್/ಪಿಐಬಿ/ನ್ಯೂಸ್ ಆನ್ ಏರ್/ಪಿ.ಎಂ.ಓ. ಎಕ್ಸ್ ಜಾಲತಾಣ

ಪ್ರದೇಶ ಸಮಾಚಾರ
**14.06.2024**
ಮಳೆ/ಮುನ್ಸೂಚನೆ

ರಾಜ್ಯದ ಉತ್ತರ ಒಳನಾಡು, ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ, **21**ನೇ ತಾರೀಖಿನ ವರೆಗೆ, ವ್ಯಾಪಕ ಮಳೆಯಾಗಲಿದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಿನಾಂಕ **19** ಮತ್ತು **20** ರಂದು, ಕರಾವಳಿ ಜಿಲ್ಲೆಗಳಲ್ಲಿ, ಮಳೆ ಹೆಚ್ಚಾಗುವ ಸಾಧ್ಯತೆಯಿದೆ ಎಂದು, ತಿಳಿಸಿದೆ.

ಹರ್ಷ/ಹೊಂಗಲ್/ಐ.ಎಂ.ಡಿ.

ಪ್ರದೇಶ ಸಮಾಚಾರ
**14.06.2024**
ಸಿದ್ದು/ಇಂದಿರಾ

ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ, ಇಂದಿರಾ ಕ್ಯಾಂಟೀನ್‌ನಲ್ಲಿ, ನಿತ್ಯ ಮೂರ ರಿಂದ ನಾಲ್ಕು ಸಾವಿರ ಕ್ಯಾಬ್ ಚಾಲಕರು, ರಿಯಾಯಿತಿ ದರದಲ್ಲಿ, ತಿಂಡಿ, ಊಟ ಸೇವಿಸಿ, ತಮ್ಮ ಹಸಿವು ನೀಗಿಸಿಕೊಳ್ಳುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಜಾಲತಾಣ ಎಕ್ಸ್‌ನಲ್ಲಿ ಪ್ರಕಟಿಸಿದ್ದಾರೆ.

ಕ್ಯಾಬ್ ಚಾಲಕರಿಗೆ ರಿಯಾಯಿತಿ ದರದಲ್ಲಿ ಆಹಾರ ಒದಗಿಸುವ ಉದ್ದೇಶದಿಂದ, ಕಳೆದ ಮಾರ್ಚ್‌ನಲ್ಲಿ ಆರಂಭಿಸಿದ ಕ್ಯಾಂಟೀನ್‌ಗೆ, ಚಾಲಕರಿಂದ ಅತ್ಯುತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ ಎಂದು, ಮುಖ್ಯಮಂತ್ರಿ ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ.

ಹರ್ಷ/ಹೊಂಗಲ್/ಮುಖ್ಯಮಂತ್ರಿ ಎಕ್ಸ್ ಖಾತೆ